**ದಿನಾಂಕ ಃ 12.03.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ **ಮುಖ್ಯ ವಿಚಾರಣೆ ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಃ- ಪಿರ್ಯಾದುದಾರರ/ ಪರ ಶ್ರೀಮತಿ ಹೆಚ್ ಟಿ ಬಿ . ವಕೀಲರಿಂದ** ಃ-

ಪಿರ್ಯಾದುದಾರರ ಅಕೌಂಟ್ ಸ್ಟೇಟ್ ಮೆಂಟ್ ಹಾಜರು ಪಡಿಸಿದ್ದು ನಿಪಿ-09, ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಯಿತು. ಅನ್ನಪೂರ್ಣೇಶ್ವರಿ ಪೋಲಿಸ್ ಠಾಣೆಯವರು ನೀಡಿದ ಸ್ವೀಕೃತಿಯನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-12 ಮತ್ತು 13 ಎಂದು ಗುರುತಿಸಲಾಯಿತು. ಧೃಡೀಕೃತ ನಕಲಿನ ದೂರು ಮತ್ತು ಹೇಳಿಕೆಯನ್ನು ಹಾಜರು ಪಡಿಸಿದ್ದು ನಿಪಿ-14 ಮತ್ತು ನಿಪಿ-15 ಎಂದು ಗುರುತಿಸಲಾಯಿತು.

ಸಾಕ್ಷಿಯು ಪುಟ್ಟಸ್ವಾಮಯ್ಯ ಮತ್ತು ನವೀನ್ ಎಸ್ ಪಿ ರವರ ಅಕೌಂಟ್ ಸ್ಟೇಟ್ ಮೆಂಟ್ , ಐ ಟಿ ರಿಟರ್ನ್ಸ್, ಹಾಗೂ ರೆಂಟಲ್ ಅಗ್ರಿಮೆಂಟ್ ಅನ್ನು ಹಾಜರು ಪಡಿಸಿದ್ದು ಆರೋಪಿ ಪರ ವಕೀಲರು ಸದರಿ ದಾಖಲೆಗಳನ್ನು ಗುರುತಿಸಲು ತಕರಾರು ಮಾಡಿದ್ದರಿಂದ ಸದರಿ ಪುಟ್ಟಸ್ವಾಮಯ್ಯ ಮತ್ತು ನವೀನ್ ಎಸ್ ಪಿ ರವರ ಅಕೌಂಟ್ ಸ್ಟೇಟ್ ಮೆಂಟ್ , ಐ ಟಿ ರಿಟರ್ನ್ಸ್, ಹಾಗೂ ರೆಂಟಲ್ ಅಗ್ರಿಮೆಂಟ್ ಅನ್ನು ಸಾಕ್ಷಿಯ ಪರವಾಗಿ ನಿಶಾನೆಗೊಳಿಸಿರುವುದಿಲ್ಲ.

ಪಾಟೀಸವಾಲುಃಃ ಆರೋಪಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಪಾಟೀಸವಾಲಿಗೆ **ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**